ಕೇಳುವ ಶಿಷ್ಟಾಚಾರವನ್ನಾದರೂ ತೋರಬೇಕಿತ್ತು ಅಂದುಕೊಂಡ. ಆಂತ್ರೋಪಾಲಜಿ ತನಗೆ ಇಷ್ಟದ್ದಾಗಿತ್ತು. ಅದರಲ್ಲಿ ಎಂ.ಎ. ಗೋಲ್ಡ್ ಮೆಡಲ್. ಆದರೆ, ಮಾನವಶಾಸ್ತ್ರ ವಿಷಯಕ್ಕೆ ಸಂಬಂಧಿಸಿ ಯಾವ ಉದ್ಯೋಗವೂ ಸಿಗಲಿಲ್ಲ. ಅದೂ ಒಂದು ಪದವಿ ಅಷ್ಟೆ. ಹೌದು. ಮಾನವ ತಳಿಯ ಪಳೆಯುಳಿಕೆಯಂತಿರುವ ಇವರೊಂದಿಗೆ ವಸತಿ ಹಂಚಿಕೊಂಡು ತಾನಿಲ್ಲಿರುವುದು ಯೋಗಾಯೋಗವೆ ಅನಿಸಿ ರೋಮಾಂಚನಗೊಂಡ. ಬೇಸಿಗೆಯಾದ್ದಕ್ಕೆ ಸರಿ, ಚಳಿಗಾಲದಲ್ಲಿ ಮಳೆಗಾಲದಲ್ಲಿ ಬಂದಿದ್ದರೆ ತಾನೆಲ್ಲಿ ಮಲಗುತ್ತಿದ್ದೆ? ಗೆಡ್ಡೆಯಿಂದಿರಬೇಕು ಸಣ್ಣಕೆ ವಾಯುವಾಗಿ ಎರಡುಬಾರಿ ಹೊರಬಿತ್ತು. ಚಡ್ಡಿ ಬನೀನು, ಕೆಳಗೆ ಹರಕು ಚಾಪೆ, ಮೇಲೆ ಕೊನೆಯಿಲ್ಲದ ವ್ಯೋಮ.

ಪದವಿಯಿರಲಿ, ತನ್ನ ಹೆಸರು ಸಹ ಗೊತ್ತಿರದ ಅನಾಮಧೇಯ ತಾನಿಲ್ಲಿ ಎಂಬ ಅನಿಸಿಕೆ ಕಣ್ಣೆವೆಯಲ್ಲಿ ಕನಸಾಗಿ ಮುಂದುವರಿಯಿತು. ಹಳ್ಳದ ಕಡೆಯಿಂದ ನರಿಗಳ ಊಳು ಕೇಳಿ ಕಣ್ಣು ಬಿಟ್ಟ ಸಮಯದಲ್ಲಿ ಬಾನಂಚಿನಲ್ಲಿ ಚಂದ್ರನ ಚೂರಂತೆ ಬೆಳ್ಳಿಚುಕ್ಕಿ ಬೆಳಗುತ್ತಿತ್ತು. ಯಜಮಾನ ಮಲಗಿದ್ದು ಎದ್ದಿದ್ದು ಒಂದು ಗೊತ್ತಿರಲಿಲ್ಲ. ನಸುಕು ಹರಿಯುವ ಹೊತ್ತಿಗೆ ಎದ್ದು ಚಾಪೆ ಮಡಿಸಿಟ್ಟು ಹಳ್ಳದ ಕಡೆ ಹೋದ. ಟೂತ್‌ಬ್ರಶ್ ಪೇಸ್ಟ್ ಒಂದೂ ಇಲ್ಲ. ಕಾಡುಮಾವಿನೆಲೆಯನ್ನು ಸುತ್ತಿ ಸಣ್ಣಕಿರುವಾಗ ಅಜ್ಜ ಮಾಡುತ್ತಿದ್ದಂತೆ ಹಲ್ಲುಜ್ಜಿ ಮುಖ ತೊಳೆಯುವಾಗ ಗಡ್ಡ ಅಂಗೈಗೆ ತರೆಯಿತು. ಶೇವಿಂಗ್ ಕಿಟ್ ಕೂಡ ಬಿಡಲಿಲ್ಲವಲ್ಲ ಅವರು ಅಂದುಕೊಂಡು ಮುಖ ಸವರಿಕೊಂಡ. ಸ್ನಾನ ಮಾಡಲೆ ಅನಿಸಿ ಮರುಕ್ಷಣ ಸಾಯಂಕಾಲ ಮಾಡಿದ್ರಾಯಿತು ಅಂತ ನಿರ್ಧರಿಸಿ ಗುಡಿಸಲತ್ತ ನಡೆದ. ಅಲ್ಲಾಗಲೆ ಯಜಮಾನ ಕುಳಿತಿದ್ದ. ಇವ ಬರುತ್ತಿದ್ದಂತೆ ಎರಡು ಪಾತ್ರೆಗಳಲ್ಲಿ ಜೋಲು ಎದೆಯವಳು ಎಂತಹದನ್ನೊ ತಂದು ಕೊಟ್ಟಳು. ಅಲ್ಯುಮಿನಿಯಂ ಪಾತ್ರೆ ನಗ್ಗಿ ಕರೆಗಟ್ಟಿತ್ತು. ಅನ್ನದ ತೆಳಿಯ ರುಚಿಯ ಅದು ತೀರ ಕಮ್ಮಿ ಅಕ್ಕಿ ಹಾಕಿ ಮಾಡಿದ ಗಂಜಿಯಾಗಿತ್ತು. ತಳದಲ್ಲಿ ಕೆಲವೆ ಅಗಳುಗಳು ಸಿಗುವ ಮಟ್ಟದಲ್ಲಿ ನೀರಿನ ಸಮೃದ್ಧಿಯಿತ್ತು. ಯಜಮಾನನ ಮುಖದಲ್ಲಿ ಊಟಕ್ಕೆ ಭಾರವಾಗಿರುವ ತನ್ನ ಬಗ್ಗೆ ಅಸಹನೆಯೇನಾದರೂ ಇದೆಯ ಅಂತ ಹುಡುಕಿದ. ಆ ಕಣ್ಣುಗಳಲ್ಲಿ ಏನೂ ಗೊತ್ತಾಗದ ನಿರ್ಲಿಪ್ತತೆಯಿತ್ತು. ಕಾಫಿಯೆಂಬ ಶಬ್ದವೆ ಹುಟ್ಟಿಲ್ಲ ಎಂಬಂತೆ ಬೆಳಗಿನ ತಿಂಡಿ ಮುಗಿದಿತ್ತು.

ತರುಣಿ ಗುಡಿಸಲಿಂದ ಹೊರಬಿದ್ದಳು. ಕೆಲಸಕ್ಕೆಂದು ಊಹಿಸಿದ ದಿವ್ಯೋತ್ತಮ ತಕ್ಷಣ ತಾನೂ ಎದ್ದು ಅಲ್ಲಿಯೆ ಇದ್ದ ಕಬ್ಬಿಣದ ಸರಳಂತಹದನ್ನು ಹಿಡಿದು ಹಿಂಬಾಲಿಸಿದ. ಯಾರೂ ಏನೂ ಹೇಳಲಿಲ್ಲ. ಬಿದಿರಿನ ಕುಕ್ಕೆಯೊಳಗೆ ಮೊಳಕೈ ಸಿಕ್ಕಿಸಿ, ಸೊಂಟಕ್ಕೊತ್ತಿಕೊಂಡು ಮತ್ತೊಂದು ಕೈಯಲ್ಲಿ ಮೋಟುಗತ್ತಿ ಹಿಡಿದು ಸಟಸಟ ಚಲಿಸುತ್ತಿದ್ದಳು. ಹಿಂಬಾಗದ ಗುಡ್ಡದಂಚನ್ನೇರಿ ಕುರುಚಲು ಕಾಡಲ್ಲಿ ಎಡಕ್ಕು ಬಲಕ್ಕು ತಿರುಗುತ್ತ ನಡೆಯುತ್ತಿದ್ದಳು. ಅಲ್ಲಲ್ಲಿ ನಿತ್ತು ಬಗ್ಗಿ ಪರೀಕ್ಷಿಸುತ್ತಿದ್ದಳು. ಒಂದು ಕಡೆ ಬುಟ್ಟಿಯನ್ನು ಕೆಳಗೆ ಹಾಕಿ ಕುಕ್ಕುರುಗಾಲಲ್ಲಿ ಕುಳಿತವಳ ಪಕ್ಕ ತಾನೂ ಕೂತ. ಅಲ್ಲಿದ್ದೊಂದು ದಪ್ಪ ಬಳ್ಳಿಯ ಬುಡದ ಮಣ್ಣನ್ನು ಕೆದಕಲು ಸುರುಮಾಡಿದವಳನ್ನು ಕೈಸನ್ನೆಯಲ್ಲಿ ತಡೆದು ತಾನು ಅಗೆಯತೊಡಗಿದ. ಒಂದಡಿಯಷ್ಟು ಅಗೆದವನಿಗೆ ಮೊಳದಷ್ಟುದ್ದ ಮುಷ್ಟಿಯಷ್ಟು ದಪ್ಪಕ್ಕಿದ್ದ ಗೆಡ್ಡೆ ಕಾಣಿಸಿತು. ಮಣ್ಣು ಬಿಡಿಸಿ ತೆಗೆದು ಮೇಲಿಟ್ಟು ಉಳಿದ ಚಿಕ್ಕಚಿಕ್ಕ ಗೆಡ್ಡೆಗಳನ್ನು ತೆಗೆಯಹೊರಟವನನ್ನು ತಡೆದಳು. 'ಬಂಜರಾಗಬಾರದು ಬಳ್ಳಿ ಮತ್ತೆ ಬೆಳೆಯಬೇಕು' ಅಂದಳು. ಮಲಯಾಳಿ ಮತ್ತು ಕನ್ನಡ ಕಲಸಿದಂತಿತ್ತು. ಬೃಹದಾಕಾರದ ಮರದಲ್ಲಿ ಹಲಸಿನಂತೆ ಕಾಣುವ ಚಿಕ್ಕ ಚಿಕ್ಕ ಅಸಂಖ್ಯಾತ ಕಾಯಿಗಳಿದ್ದವು. ಕಲ್ಲು, ಮರದ ಬಡಿಗೆಯನ್ನು ಮರಕ್ಕೆ ಎಸೆಯುತ್ತ ನಾಕಾರು ಕಾಯಿಗಳನ್ನು ಕೆಡವುವಾಗ ಬೆವರು ಹರಿಯಿತು. ಯಾವುದೊ ಸೊಪ್ಪು ಬೇರುಗಳನ್ನು ಬುಟ್ಟಿಯಲ್ಲಿ ತುಂಬಿ ಸಾಕೆನಿಸಿದಾಗ ದಣಿವಾರಿಸಿಕೊಳ್ಳಲು ಕುಳಿತರು. ತಾನಿವತ್ತು ಗಳಿಸಿದೆ ಅನ್ನುವ ಸಮಾಧಾನ ಅವನಿಗೂ ಆಗಿತ್ತು.

ಸದಾ ಪ್ಯಾಂಟು ಹಾಕಿ ಬೆಳ್ಳಗೆ ಮಿರುಗುತ್ತಿದ್ದ ಇವನ ತೊಡೆ ಮೊಣಕಾಲುಗಳನ್ನು ಅವಳು